**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 05-03-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಎಲ್ ಐ ಸಿ ಏಜೆಂಟ ಆಗಿ 1995 ರಿಂದ ಕೆಲಸ ಮಾಡುತ್ತಿದ್ದೇನೆ. ನಿತಿನ ಮತ್ತು ನಿಶ್ಚಲ ನನ್ನ ಮಕ್ಕಳು ಎಂದರೆ ಸರಿ. ನನ್ನ ಮಗ ನಿತಿನ್ ರವರು ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆರೋಪಿಯು ನನ್ನ ಮಗನಿಂದ 2018 ರಿಂದ ಪರಿಚಯ ಆಗಿರುತ್ತಾರೆ. ಆರೋಪಿಯ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಎಷ್ಟು ಆದಾಯ ಖರ್ಚು ಇದೆ ಎಂದು ನನಗೆ ಗೊತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳಾಗಿದ್ದೇನೆ. ನಾನು 2000 ನೇ ಇಸವಿಯಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಸದರಿ 2019-20 ರ ಆದಾಯ ತೆರಿಗೆಯಲ್ಲಿ ಆರೋಪಿಗೆ ಸಾಲ ನೀಡಿದ ವಿಚಾರವನ್ನು ಹೇಳಿಲ್ಲ ಸಾಕ್ಷಿ ಮುಂದುವರೆದು ವಿವಾದಿತ ವ್ಯವಹಾರವು ನನ್ನ ಗಂಡನೊಂದಿಗೆ ಆಗಿದ್ದು ನನ್ನ ಗಂಡ ಮರಣ ಹೊಂದಿರುವುದರಿಂದ ನಾನು ನಡೆಸುತ್ತಿದ್ದೇನೆ ಎನ್ನುತ್ತಾರೆ. ನನ್ನ ಗಂಡ ಗೆಜ್ಜಲಗೆರೆ ಹಾಲಿನ ಡೈರಿಯಲ್ಲಿ ಅಕೌಂಟ್ಸ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಸದರಿಯವರು 1984 ರಿಂದ 2017 ರ ವರೆಗೆ ಕೆಲಸ ಮಾಡಿದ್ದಾರೆ . ಸದರಿಯವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸದರಿಯವರು ಆದಾಯ ತೆರಿಗೆ ಪಾವತಿ ಮಾಡತ್ತಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಗಂಡ ಮತ್ತು ಆರೋಪಿ ನಡುವೆ ವ್ಯವಹಾರ ಮಾಡಿದಾಗ ನಾನು ಇದ್ದೆ .ಸಾಕಿ ಮುಂದುವರೆದು ನನ್ನ ಮುಂದೆಯೇ ಚೆಕ ನೀಡಿದ್ದರು ಎನ್ನುತ್ತಾರೆ. ನನ್ನ ಗಂಡ 2019 ಡಿಸೆಂಬರ 23 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಗಂಡನಿಂದ ಆರೋಪಿಯು ಹೋಟೆಲ ವ್ಯವಹಾರ ಮಾಡಲು ಮತ್ತು ಕೈ ಸಾಲ ತೀರಿಸಲೆಂದು

ಒಂದು ತಿಂಗಳ ಕಾಲಾವಕಾಶ ಪಡೆದು ಸಾಲ ಪಡೆದಿದ್ದರು. ಒಂದು ತಿಂಗಳಲ್ಲಿ ವಾಪಸ್ಸು ಮಾಡುತ್ತೇನೆ ಎಂಬ ವಿಚಾರವನ್ನು ನನ್ನ ಪ್ರಮಾಣ ಪತ್ರ ಮತ್ತು ದೂರಿನಲ್ಲಿ ಹೇಳಿಲ್ಲ. ನನ್ನ ಪ್ರಮಾಣ ಪತ್ರ ಮತ್ತು ದೂರನ್ನು ನಾನು ಓದಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ಮಾಹಿತಿಯನ್ನು ನಾನೇ ನೀಡಿದ್ದೇನೆ ಎಂದರೆ ಸರಿ. 2018 ರಿಂದಲೇ ನನ್ನ ಗಂಡನಿಗೂ ಆರೋಪಿಯ ಪರಿಚಯವಾಗಿರುತ್ತಾರೆ. ಆರೋಪಿಯ ಹೆಸರು ಶರತ್ ಹೆಚ್ ಎಂ ಎಂಬುದು ಚೆಕ್ಕನಲ್ಲಿ ನಮೂದಿಸಿರುವುದರಿಂದ ನನಗೆ ಗೊತ್ತಾಗಿರುತ್ತದೆ. ಚೆಕ್ಕನ್ನು ನೋಡಿ ಆರೋಪಿಯ ಹಸೆರನ್ನು ಹೇಳುವಂತೆ ಕೇಳಿದಾಗ ಸಾಕ್ಷಿಯು ಪರಿಶೀಲಿಸಿ ಸದರಿ ಆರೋಪಿಯ ಹೆಸರು ಚೆಕ್ಕನಲ್ಲಿ ಇಲ್ಲದೇ ಇದ್ದರೂ ಕೂಡಾ ನನಗೆ ಆರೋಪಿಯ ತಂದೆ ಹೆಸರು ಗೊತ್ತಿರುವುದರಿಂದ ಮತ್ತು ತಂದೆಯ ಹೆಸರನ್ನು ನಮೂದಿಸಬೇಕಿರುವುದರಿಂದ ಸದರಿ ಶರತ್ ಹೆಚ್ ಎಂ ಎಂದು ನಮೂದಿಸಿದ್ದೇನೆ ಎನ್ನುತ್ತಾರೆ. ನಿಪಿ 1 ರ ಚೆಕ್ಕನ ಒಕ್ಕಣೆಯನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ 1 ರಲ್ಲಿ ಸಹಿಯ ಇಂಕ್ ಮತ್ತು ಒಕ್ಕಣೆಯ ಇಂಕ್ ಬೇರೆ ಬೇರೆ ಇದೆ ಎಂದರೆ ಸರಿ. ಚೆಕ್ಕನ್ನು ದಿನಾಂಕ 01-09-2019 ರಂದು ಆರೋಪಿಯು ನನಗೆ ನೀಡಿರುತ್ತಾರೆ. ಸದರಿ ವೇಳೆಯಲ್ಲಿ ನಾನು ಮತ್ತು ನನ್ನ ಗಂಡ ಇದ್ದು ಚೆಕ್ಕನ್ನು ನನ್ನ ಮನೆಯಲ್ಲಿ ನೀಡಿರುತ್ತಾರೆ . ದಿನಾಂಕ 01-09-2019 ರಂದು ನನ್ನ ಗಂಡ ಆರೋಪಿಗೆ ಮನೆಯಲ್ಲಿಯೇ ಹಣ ನೀಡಿರುತ್ತಾರೆ. ಹಣ ಪಡೆದಾಗ ಆರೋಪಿಯು ದಾಖಲಾತಿ ನೀಡಿಲ್ಲ. ಆರೋಪಿಗೆ 10 ಲಕ್ಷ ನೀಡಿದ ಸಂಬಂಧ ದಾಖಲಾತಿ ಬರೆಸಿಕೊಂಡಿಲ್ಲ. ನಾನು ನೋಟೀಸ ಮತ್ತು ದೂರಿನಲ್ಲಿ 10 ಲಕ್ಷ ಪಡೆದಾಗ ಯಾವುದೇ ದಾಖಲಾತಿ ನೀಡಿಲ್ಲ ಎಂಬ ವಿಚಾರವನ್ನು ಹೇಳಿದ್ದೇನೆ.

ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು